ಶ್ರೀ ಎಂ. ಎಸ್. ಕೃಷ್ಣನ್.—ಅನ್ಯಾಯವಾಗಿದ್ದರೆ ಸರಿಪಡಿಸುತ್ತಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಸರಿಪಡಿಸುತ್ತೇವೆ.

* *X-ray Facilities at the Combined Dispensary, Madhugiri*

498. SRI R. CHIKKAIAH (Madhugiri) –

Will the Minister for Health be pleased to state :—

(*a*) whether the Government is aware of the necessity of X-ray facilities at the Combined Dispensary, Madhugiri ;

(*b*) since how long this matter is pending before the Government ;

(*c*) the probable period required by Government for affording these facilities to Madhugiri people ?

SRI H. SIDDAVEERAPPA (Minister for Health)—

(*a*) Yes.

(*b*) Government have already accorded permission to install the X-ray Plant which is to be donated by the Rotary Club, Madhugiri.

(*c*) X-ray facilities will be made available as soon as X-ray plan is received from the Rotary Club, Madhugiri.

ಶ್ರೀ ಆರ್. ಚಿಕ್ಕಯ್ಯ.—ಸ್ವಾಮಿ ತಮ್ಮ ಉತ್ತರದಲ್ಲಿ ರೋಟರಿ ಕ್ಲಬ್‌ನವರು ಕೊಟ್ಟಮೇಲೆ ಇನ್‌ಸ್ಟಾಲ್ ಮಾಡುವುದಕ್ಕೆ ಆರ್ಡರ್ ಮಾಡಿದ್ದೇವೆಂದು ಹೇಳಿದ್ದೀರಿ. ರೋಟರಿ ಕ್ಲಬ್‌ನವರು ಕೊಡುವುದಿಲ್ಲವೆಂದು ಬರೆದುಕೊಟ್ಟಿರುವುದು ತಮ್ಮ ಗಮನದಲ್ಲಿದೆಯೇ ?

† ಶ್ರೀ ಎಚ್. ಸಿದ್ದವೀರಪ್ಪ.—ಮೊದಲು ಬಂದಿರುವ ಸಮಾಚಾರದ ಪ್ರಕಾರ ಗೌರ್ನಮೆಂಟ್ ಆರ್ಡರ್ ಆಗಿರುವುದು, ರೋಟರಿ ಕ್ಲಬ್‌ನವರು ಕೊಡುತ್ತಾರೆ, ಅದನ್ನು ನಾವು ಇನ್‌ಸ್ಟಾಲ್ ಮಾಡಬೇಕು ಎಂದು. ಆದರೆ ರೋಟರಿ ಕ್ಲಬ್‌ನವರು ಕೊಡುವುದಿಲ್ಲವೆಂದು ಖಚಿತವಾಗಿ ಹೇಳಿರತಕ್ಕಂಥಾದ್ದು ನನ್ನ ಹತ್ತಿರ ಇಲ್ಲ.

ಶ್ರೀ ಆರ್. ಚಿಕ್ಕಯ್ಯ.—ರೋಟರಿ ಕ್ಲಬ್‌ನವರು ಕೊಡವೇ ಇದ್ದರೂ ಸರ್ಕಾರದ ವತಿಯಿಂದ ಕೊಡಿಸಿ ಇನ್‌ಸ್ಟಾಲ್ ಮಾಡಿಕೊಡುತ್ತಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ —ರೋಟರಿ ಕ್ಲಬ್‌ನವರು ಕೊಡುವುದಿಲ್ಲವೆಂದು ಹೇಳಲಿ. ಆಮೇಲೆ ಅದನ್ನು ಯೋಚನೆ ಮಾಡೋಣ ಮಧುಗಿರಿ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗೆ ಎಕ್ಸ್‌ರೇ ಪ್ಲಾಂಟ್ ಬೇಕು ಎಂಬುದು ಗೊತ್ತಿದೆ. ರೋಟರಿ ಕ್ಲಬ್‌ನವರು ಎಕ್ಸ್‌ರೇ ಪ್ಲಾಂಟ್ ಕೊಡುತ್ತೇವೆಂದು ಮುಂದೆ ಬಂದರೆ ಬಿಲ್ಡಿಂಗ್ ಕಟ್ಟಿಸಲಿಕ್ಕೆ, ಎಕ್ಸ್‌ರೇ ಫಿಲಂಸ್ ಕೊಂಡುಕೊಳ್ಳಲಿಕ್ಕೆ ಅದಕ್ಕೆ ಎಲ್ಲಾ ಕಂಟಿನ್‌ಜೆನ್ಸಿಯಿಂದ ಪ್ರೊವೈಡ್ ಮಾಡಿದ್ದಾರೆ.

ಶ್ರೀ ಆರ್. ಚಿಕ್ಕಯ್ಯ.—ಅವರು ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಸರ್ಕಾರದ ವತಿಯಿಂದ ಅದನ್ನು ಕೊಡಿಸಿಕೊಡುತ್ತಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಕೊಡುವುದಿಲ್ಲವೆಂದು ಬರೆಯಲಿ. ಮೊದಲು ಅವರು ಕೊಡುತ್ತೇವೆಂದು ಬರೆದಿದ್ದಾರೆ.

ಶ್ರೀ ಆರ್. ಚಿಕ್ಕಯ್ಯ.—ಅವರು ಕೊಡದೇ ಇದ್ದರೆ ಸರ್ಕಾರದ ವತಿಯಿಂದ ಕೊಡಿಸಿಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಕೊಡದೇ ಇದ್ದರೆ ನಾವು ಕೊಟ್ಟೇ ತೀರಬೇಕು, ಕೊಡೋಣ.